## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ಇವರು ನಿಯಮ 72ರಡಿ ಕೋರಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:-**

ಕರ್ನಾಟಕ ರಾಜ್ಯದ ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಭೂ ನ್ಯಾಯ ಮಂಡಳಿಗಳು ಹಾಗೂ ಬಗರ್ ಹುಕ್ಕುಂ ಸಮಿತಿಗಳು ಇವುಗಳ ಸ್ಥಾಪನೆ, ರಚನೆ, ಕಾರ್ಯವ್ಯಾಪ್ತಿ ಉದ್ದೇಶಗಳು ಒಂದೊಕ್ಕೊಂದು ತಾಳೆ ಇವೆಯೇ ಎಂಬುದರ ಬಗ್ಗೆ ಸರ್ಕಾರ ತಿಳಿಸಬೇಕೆಂದು ರಾಜ್ಯದಲ್ಲಿ ಸಾವಿರಾರು ಭೂ ರಹಿತ ರೈತರು ಗೋಮಾಳ ಹಾಗೂ ಇತರೆ ಭೂಮಿಗಳನ್ನು ಬಗರ್ ಹುಕ್ಕುಂನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಸದರಿ ಜಮೀನನ್ನು ಮಂಜೂರು ಸಂಬಂದ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಕಾರಣಾಂತರಗಳಿಂದ ಜಮೀನು ಕೆಲವರಿಗೆ ಮಂಜೂರಾಗಿದ್ದು, ಕೆಲವರಿಗೆ ಮಂಜೂರಾಗಿರುವುದಿಲ್ಲ.

ಸದರಿ ಜಮೀನು ಮೊದಲಿಗೆ ಪಟ್ಟಣ ಪಂಚಾಯಿತಿಯ ಸರಹದ್ದಿನಿಂದ 5ಕೀ.ಮಿ ಗಿಂತ ದೂರದಲ್ಲಿರುತ್ತದೆ. ನಂತರ ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ಪರಿವರ್ತನೆಗೊಂಡ ನಂತರ ಸದರಿ ಜಮೀನು ಪುರಸಭೆ ಸರಹದ್ದಿನ 2 ಕಿಮೀ ವ್ಯಾಪ್ತಿಯಲ್ಲಿರುತ್ತದೆ. ಈಗ ನೀವು ಬಫರ್ ವಲಯದಲ್ಲಿದೆ ಮಂಜೂರು ಮಾಡಲು ಸಾದ್ಯವಿಲ್ಲ ಎಂದು ಜಾಗ ಖಾಲಿ ಮಾಡಲು ಸದರಿ ರೈತರಿಗೆ ನೋಟಿಸ್ ನೀಡಲಾಗುತ್ತಿದೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಕಸಬ ಹೋಬಳಿಯ ಬೇಗೂರು ಗ್ರಾಮದ ಸರ್ವೇ ನಂ.29 ಗೋಮಾಳ ಇಲ್ಲಿ ಈ ರೀತಿ ರೈತರಿಗೆ ಅನ್ಯಾಯವಾಗುತ್ತಿದ್ದು, ಕಳೆದ 50 ವರ್ಷಗಳಿಂದ ಸದರಿ ಜಮೀನನ್ನು ಸಾಗುವಳಿ ಮಾಡುತ್ತಿರುವವರಿಗೆ ಮಂಜೂರು ಮಾಡಿ ಕೊಟ್ಟು ಈ ರೀತಿಯ ರಾಜ್ಯದಲ್ಲಿರುವ ಸಾವಿರಾರು ಪ್ರಕರಣಗಳಿಗೆ ನ್ಯಾಯ ಒದಗಿಸಿಕೊಡುವ ಕುರಿತು.

**ಹೇಳಿಕೆ:-**

**ಕರ್ನಾಟಕ ಭೂಸುಧಾರಣಾ ಕಾಯ್ದೆ, 1961ರಡಿ ಭೂ ನ್ಯಾಯ ಮಂಡಳಿ ರಚನೆ ಕುರಿತು**

**ಭೂ ನ್ಯಾಯಮಂಡಳಿಯ ನೇಮಕ ಮತ್ತು ಅಧಿಕಾರ:-**

ಸರ್ಕಾರವು ಕರ್ನಾಟಕ ಭೂಸುಧಾರಣಾ ಕಾಯ್ದೆ, 1961 ಅನ್ನು ಜಾರಿಗೆ ತಂದು ಕೃಷಿ ಹಿಡುವಳಿಗಳ ನಿರ್ವಹಣೆ ಮತ್ತು ಹೆಚ್ಚುವರಿ ಭೂಮಿಯನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ಹಂಚಿಕೆ ಮಾಡುವ ವಿಷಯದಲ್ಲಿ ಅಮೋಘ ಸಾಧನೆ ಮಾಡಿದ ಈ ಒಂದು ಉದ್ದೇಶದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ. 1961ರ ಕಲಂ 48ರನ್ವಯ ಗೇಣಿದಾರರನ್ನು ಅಧಿಭೋಗದಾರರೆಂದು ಗುರುತಿಸುವುದಕ್ಕೆ ನ್ಯಾಯಾಂಗ ಕಾರ್ಯವ್ಯಾಪ್ತಿಯುಳ್ಳ ಭೂ ನ್ಯಾಯಮಂಡಳಿಗಳನ್ನು ರಚಿಸಿ ಈ ಭೂ ನ್ಯಾಯಮಂಡಳಿಗಳ ಮೂಲಕ ಭೂಮಿಯ ಒಡೆತನದ ಹಕ್ಕು ನಿರ್ಧರಿಸಲು ಅವಕಾಶ ಕಲ್ಪಿಸಲಾಗಿದೆ.

**ಕಲಂ 48 ನ್ಯಾಯಾಧೀಕರಣಗಳ ರಚನೆ:-**

ಕರ್ನಾಟಕ ಭೂ ಸುಧಾರಣೆ ಕಾಯ್ದೆ. 1961ರ ಕಲಂ 48ರ ಉಪ ಕಲಂ (i) ಹಾಗೂ (ii)ರನ್ವಯ ಪ್ರತಿ ತಾಲ್ಲೂಕಿಗೆ ಒಂದರಂತೆ ಆಯಾ ಸಹಾಯಕ ಆಯುಕ್ತರು ಹಾಗೂ ನಿರ್ಧಿಷ್ಟ ಉದ್ದೇಶಕ್ಕಾಗಿ ನಿಗದಿಪಡಿಸಲಾದ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಕಡೇ ಪಕ್ಷ ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಸದಸ್ಯರನ್ನೊಳಗೊಂಡ ನಾಲ್ಕು ಸದಸ್ಯರ ಭೂ ನ್ಯಾಯಮಂಡಳಿಗಳನ್ನು ಸರ್ಕಾರವು ಅಧಿಸೂಚನೆ ಮೂಲಕ ರಚಿಸಲು ಅವಕಾಶ ಕಲ್ಪಿಸಲಾಗಿದೆ. ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು ಸದಸ್ಯ ಕಾರ್ಯದರ್ಶಿಯವರಾಗಿರುತ್ತಾರೆ.

**ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರನ್ವಯ ರಚಿಸ ಬೇಕಾಗಿರುವ ಭೂ ನ್ಯಾಯಮಂಡಳಿ ಸದಸ್ಯರುಗಳನ್ನು ನಾಮನಿರ್ದೇಶಿಸಲು ಮಾನದಂಡಗಳು**

ಸದರಿ ಭೂ ನ್ಯಾಯಮಂಡಳಿಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 44 ಎಲ್‌ಆರ್‌ಎ 99, ದಿನಾಂಕ:05-08-2000 ರನ್ವಯ ಭೂ ನ್ಯಾಯಮಂಡಳಿಗಳಿಗೆ ನಾಮ ನಿರ್ದೇಶನಗೊಳ್ಳುವ ವ್ಯಕ್ತಿಯು ಸಾಮಾನ್ಯ ವರ್ಗದವರಾಗಿದ್ದಲ್ಲಿ, 12ನೇ ತರಗತಿ ಕಡಿಮೆ ಇಲ್ಲದ ವಿದ್ಯಾರ್ಹತೆಯನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರದ ಸದಸ್ಯನಾಗಿದ್ದಲ್ಲಿ 8ನೇ ತರಗತಿಗೆ ಕಡಿಮೆ ಇಲ್ಲದ ವಿದ್ಯಾರ್ಹತೆ ಹೊಂದಿರಬೇಕು. ವ್ಯಕ್ತಿಗಳು ಸಮಾಜದಲ್ಲಿ ಸುಸಂಸ್ಕೃತರಾಗಿದ್ದು, ಅವರ ಗುಣನಡತೆಗಳು ಸಂಶಯಾತೀತ ಹಾಗೂ ಪೂರ್ವ ಇತಿಹಾಸದಿಂದ ಶುದ್ಧ ಚಾರಿತ್ರ್ಯವುಳ್ಳ ವ್ಯಕ್ತಿಗಳಾಗಿರಬೇಕಾಗಿರುತ್ತದೆ.

**ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ**

- **ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ರ ಕಲಂ 94-ಎ** ರಡಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ವಿಧಾನಸಭಾ ಕ್ಷೇತ್ರವಾರು ರಚಿಸಲು ಅವಕಾಶ ಕಲ್ಪಿಸಲಾಗಿದೆ.
- **ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 108-ಇ** ರಡಿಯಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಈ ಕೆಳಕಂಡಂತೆ ಇರತಕ್ಕದ್ದು ಎಂದು ತಿಳಿಸಲಾಗಿದೆ.

  - ತಾಲ್ಲೂಕಿನ ಪ್ರಮುಖ ಭಾಗವನ್ನು ಪ್ರತಿನಿಧಿಸುವ ಕರ್ನಾಟಕ ವಿಧಾನಸಭೆಯ ಸದಸ್ಯರು;
  - ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನ ಮಾಡಲ್ಪಡುವ ಮೂವರು ವ್ಯಕ್ತಿಗಳಿದ್ದು, ಅವರದರಲ್ಲಿ ಒಬ್ಬರು ಮಹಿಳೆ, ಇನ್ನೊಬ್ಬರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಾಗಿರುತಕ್ಕದ್ದು;
  - ಜನಸಂಖ್ಯೆಯ ಆಧಾರದಲ್ಲಿ ವಿಧಾನ ಸಭೆಯ ಕ್ಷೇತ್ರದ ಪ್ರಮುಖ ಭಾಗವನ್ನು ಹೊಂದಿರುವ ತಾಲ್ಲೂಕಿನ ತಹಶೀಲ್ದಾರ್ ರವರು ಸಮಿತಿಯ ಕಾರ್ಯದರ್ಶಿ ಆಗಿರತಕ್ಕದ್ದು.

- **ಕರ್ನಾಟಕ ಭೂ ಕಂದಾಯ ನಿಯಮಗಳು, 1966 ರ ನಿಯಮ 108-ಇಇ ಅನ್ವಯ ಹೆಚ್ಚುವರಿ ಸಮಿತಿಯನ್ನು** (Additional Committee) ರಚಿಸಲು ಅವಕಾಶ ಕಲ್ಪಿಸಲಾಗಿದ್ದು, ಈ ಕೆಳಕಂಡಂತೆ ಸದಸ್ಯರನ್ನು ಹೊಂದಿರತಕ್ಕದ್ದು ಎಂದು ತಿಳಿಸಲಾಗಿದೆ.

  - ಅಧ್ಯಕ್ಷನೆಂದು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತನಾದ ಒಬ್ಬ ವ್ಯಕ್ತಿ;
  - ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನ ಮಾಡಲ್ಪಡುವ ಮೂವರು ವ್ಯಕ್ತಿಗಳಿದ್ದು, ಅವರದರಲ್ಲಿ ಒಬ್ಬರು ಮಹಿಳೆ, ಇನ್ನೊಬ್ಬರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಾಗಿರುತಕ್ಕದ್ದು;
  - ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್ ರವರು ಸಮಿತಿಯ ಕಾರ್ಯದರ್ಶಿ ಆಗಿರತಕ್ಕದ್ದು.

**ತುಮಕೂರು ಜಿಲ್ಲೆ, ಕಸಬಾ ಹೋಬಳಿಯ ಬೇಗೂರು ಗ್ರಾಮದ ಸರ್ವೆ ನಂ.29 ಸರ್ಕಾರಿ ಗೋಮಾಳ ಜಮೀನಿನ ವಿವರ ಈ ಕೆಳಗಿನಂತಿರುತ್ತದೆ.**

1. ಒಟ್ಟು ವಿಸ್ತೀರ್ಣ :79-08 (ಎಕರೆ/ಗುಂಟೆ)
2. ಖರಾಬು (ಅ) :18-36 (ಎಕರೆ/ಗುಂಟೆ)
3. ಖರಾಬು (ಬ) : 00-10 (ಗುಂಟೆ)

**ಒಟ್ಟು ವಿಸ್ತೀರ್ಣ 60-02 (ಎಕರೆ/ಗುಂಟೆ)**

4. ಗ್ರಾಮೀಣಾಭಿವೃದ್ಧಿ :0-20 (ಎಕರೆ/ಗುಂಟೆ)
   (ಕಸ ವಿಲೇವಾರಿ ಘಟಕ)

5. ಆಶ್ರಯ ಯೋಜನೆಗಾಗಿ :2-20 (ಎಕರೆ/ಗುಂಟೆ)

6. ನಮೂನೆ-50 ರಲ್ಲಿ :5-32 (ಎಕರೆ/ಗುಂಟೆ)
6 ಜನರಿಗೆ ಜಮೀನು ಮಂಜೂರು

**ಒಟ್ಟು ಉಳಿಕೆ ವಿಸ್ತೀರ್ಣ 51-10 (ಎಕರೆ/ಗುಂಟೆ)**

ಹಾಲಿ ನಮೂನೆ-57 ರಲ್ಲಿ ಒಟ್ಟು 8 ಅರ್ಜಿಗಳು ಮಂಜೂರಾತಿಗಾಗಿ ಸ್ವೀಕೃತವಾಗಿದ್ದು, ಸುತ್ತೋಲೆ ಸಂಖ್ಯೆ:ಆರ್‌ಡಿ 02 ಎಲ್‌ಜಿಪಿ 2021, ದಿ:24.02.2022 ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97(1)ರನ್ವಯ ಸದರಿ 8 ಅರ್ಜಿಗಳನ್ನು ವಜಾಗೊಳಿಸಲಾಗಿರುತ್ತದೆ. ಪ್ರಸ್ತುತ ಸದರಿ ಜಮೀನು ಗೋಮಾಳ ಜಮೀನಾಗಿರುವುದರಿಂದ ಹಾಗೂ ಜಾನುವಾರುಗಳ ಅನುಪಾತಕ್ಕಿಂತ ಕಡಿಮೆ ಇರುವುದರಿಂದ. ಮಂಜೂರಿ ಮಾಡಲು ರಹಾ ಇರುವುದಿಲ್ಲ.

ಮುಂದುವರೆದು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ನಿಯಮ 94-ಎ(4) ರನ್ವಯ ಬೇಗೂರು ಗ್ರಾಮವು ಪುರಸಭೆ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ನಮೂನೆ-57ರ ಅರ್ಜಿಗಳನ್ನು ಪರಿಗಣಿಸಿ ಮಂಜೂರಾತಿ ನೀಡಲು ರಹಾ ಇರುವುದಿಲ್ಲ. ಅಲ್ಲದೇ, ಮಾನ್ಯ ಸರ್ವೋಚ್ಚ ನ್ಯಾಯಾಲಯವು Jagpal Singh and Ors. vs State of Punjab, reported in (2011) 11 SCC 396 ಹಾಗೂ Joginder and Ors. vs State of Haryana, Special Leave Petition (Civil) No. 1829 of 2021 ಮತ್ತು Hinch Lal Tiwari VS Kamala Devi & Others on 25 July, 2001 ಪ್ರಕರಣಗಳನ್ವಯ, ಪೊರಂಬೋಕು / ಗೋಮಾಳ/ ಖರಾಬು/ ಜಲಮೂಲ ಜಮೀನುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸಂರಕ್ಷಿಸಲು ಎಲ್ಲಾ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನವಿರುತ್ತದೆ.

ಆದ್ದರಿಂದ, ಬೇಗೂರು ಗ್ರಾಮದ ಉಳಿಕೆ ಗೋಮಾಳ ವಿಸ್ತೀರ್ಣ 51-10 ಎಕರೆ/ಗುಂಟೆ ಜಮೀನನ್ನು ಸರ್ಕಾರದ ವಿವಿಧ ಉದ್ದೇಶಗಳಿಗಾಗಿ ಮೀಸಲಿರಿಸಲಾಗಿರುತ್ತದೆ.

**ಸಂಖ್ಯೆ:ಆರ್‌ಡಿ 111 ಎಲ್‌ಜಿಟಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು